ಜೊತೆಗೆ ಅವನು ಎರಡು ಕಾಲುಗಳಿಂದ ನೇರವಾಗಿ ನಿಂತು ನಡೆದಾಡತೊಡಗಿದ. ಇದರಿಂದ ಬೇಟೆಯ ಅಸ್ತ್ರಗಳನ್ನು ಕೊಂಡೊಯ್ಯುವುದು ಸುಲಭವಾದರೂ ಸ್ತ್ರೀಯರಿಗೆ ಮಕ್ಕಳನ್ನು ಬೆನ್ನಿನ ಮೇಲೆ ಹೊತ್ತು ತಿರುಗುವುದು ಸಾಧ್ಯವಾಗದೆ ಕೈಯಲ್ಲಿ ಹಿಡಿದುಕೊಳ್ಳಬೇಕಾಯಿತು. ಹೀಗೆ



ಚಿತಗಳು:ರ: ರಂಜು, ಪಿ.

ಮಕ್ಕಳನ್ನು ಕೈಯಲ್ಲಿ ಹಿಡಿದು ಅಹಾರವನ್ನು ಹುಡುಕುವುದು ಮತ್ತು ಶತ್ರುಗಳಿಂದ ರಕ್ಷಿಸಿಕೊಳ್ಳುವುದು ಮಹಿಳೆಯರಿಗೆ ಕಷ್ಟಕರವೆನ್ನಿಸಿ ಮಕ್ಕಳನ್ನು ಬೆಳೆಸಲು ಅವರು ಪುರುಷರ ಸಹಕಾರವನ್ನು ನಿರೀಕ್ಷಿಸತೊಡಗಿದರು. ಆಗ ಗಂಡು–ಹೆಣ್ಣುಗಳು ಒಟ್ಟಾಗಿ ಬದುಕುವುದು ಅನಿವಾರ್ಯವಾಯಿತು.

ಸಾಕಷ್ಟು ಪ್ರಾಣಿ ಪಕ್ಷಿಗಳಲ್ಲಿ ಪುಟಾಣಿ ಮರಿಗಳು ಸ್ವತಂತ್ರವಾಗಿ ಬದುಕುವ ಹಂತಕ್ಕೆ ಬರುವವರೆಗೆ ಅವುಗಳ ಜನ್ಮಕ್ಕೆ ಕಾರಣವಾದ ಗಂಡು ಹೆಣ್ಣುಗಳು ಒಟ್ಟಾಗಿ ಬದುಕುತ್ತವೆ. ನಂತರದಲ್ಲಿ ಆ ಮರಿಗಳ ತಂದೆತಾಯಿಗಳು ತಮ್ಮ ತಮ್ಮ ದಾರಿ ಹಿಡಿದು ಸಂಗಾತಿಗಳನ್ನು ಹುಡುಕಿಕೊಳ್ಳುತ್ತವೆ.

ಮಾನವರಲ್ಲಿ ಮಗು ಸ್ವತಂತ್ರವಾಗಿ ಬದುಕುವ ಶಕ್ತಿ ಪಡೆಯಲು ಸುಮಾರು 5 ವರ್ಷಗಳು ಬೇಕಾಗಬಹುದು ಎನ್ನುವುದು ವಿಜ್ಞಾನಿಗಳ ಅಭಿಪ್ರಾಯ. ಹಾಗಾಗಿ ಪ್ರಾರಂಭದ ಹಂತದಲ್ಲಿ ಸ್ತ್ರೀಪುರುಷರು 4–5 ವರ್ಷಗಳು ಮಾತ್ರ ಒಟ್ಟಾಗಿದ್ದು ನಂತರ ಮುಂದಿನ ಸಂತಾನಕ್ಕಾಗಿ ಹೊಸ ಹೊಸ ಸಂಗಾತಿಗಳನ್ನು ಹುಡುಕಿಕೊಂಡು ಹೋಗುತ್ತಿರಬಹುದು. ಆದರೆ ಹೀಗೆ ಒಟ್ಟಾಗಿ ಬದುಕುತ್ತಿದ್ದಾಗ ಅವರ ಮಧ್ಯೆ ಒಂದು ರೀತಿಯ ಭಾವನಾತ್ಮಕ ಬಾಂಧವ್ಯ ಸೃಷ್ಟಿಯಾಗುತ್ತಾ ಬಂದಂತೆ ತಲೆಮಾರುಗಳ ನಂತರ ಒಂದು ಗಂಡು ಮತ್ತು ಒಂದು ಹೆಣ್ಣು ಜೀವಮಾನವೆಲ್ಲಾ ಒಟ್ಟಾಗಿ ಕಳೆಯುವ ರೂಢಿ ಶುರುವಾಗಿರಬಹುದು.

ಹೀಗೆ ಸುಮಾರು 2 ಲಕ್ಷ ವರ್ಷಗಳ ಹಿಂದೆಯೇ ಕುಟುಂಬ ಜೀವನದ ಕಲ್ಪನೆ ಪ್ರಾರಂಭವಾದಾಗಿನಿಂದ ಗಂಡು ಹೆಣ್ಣುಗಳು ಒಬ್ಬರೇ ಸಂಗಾತಿಯನ್ನು ಪರಸ್ಪರ ಓಲೈಸುವುದು ಮತ್ತು ಆರಾಧಿಸುವುದಕ್ಕಾಗಿ ಪ್ರೀತಿ, ಪ್ರಣಯ ಸಹಜವಾಯ್ತು. ಬದಲಾದ ಜೀವನಶೈಲಿಗೆ ತಕ್ಕಂತೆ ಮಿದುಳು ವಿಕಾಸವಾಗತೊಡಗಿತು. ಸಂವಹನದ ಮಾಧ್ಯಮವಾಗಿ ಭಾಷೆ ರೂಪುಗೊಂಡಿತು. ಪ್ರೀತಿಯನ್ನು ವ್ಯಕ್ತಪಡಿಸಲು ಭಾಷೆ ಪರಿಣಾಮಕಾರಿಯಾಗಿ ಬಳಕೆಯಾಗತೊಡಗಿತು. ವಿಧವಿಧವಾದ ಕಲೆ ಕೌಶಲ್ಯ ಕ್ರೀಡೆಗಳನ್ನು ಹುಡುಕುತ್ತಾ ಹೋದ ನಮ್ಮ ಪೂರ್ವಜರು ಅದನ್ನು ರಂಜನೆಗಾಗಿಯಲ್ಲದೆ ಭಾವೀ ಸಂಗಾತಿಯನ್ನು ಆಕರ್ಷಿಸಲು ಮತ್ತು ಪ್ರಭಾವಿಸಲು ಬಳಸತೊಡಗಿದರು.

ಇವತ್ತಿನ ನಮ್ಮ ಮಿದುಳು ಪ್ರೀತಿ ಪ್ರಣಯಗಳಿಗಾಗಿ ಆಕಾರದಲ್ಲಿ ತೂಕದಲ್ಲಿ ರಚನೆಯಲ್ಲಿ ಹಂತಹಂತವಾಗಿ ಸಾಕಷ್ಟು ಬದಲಾವಣೆಯಾಗುತ್ತಾ ಬಂದಿದೆ. ವೋಲ್ ಎನ್ನುವ ಒಂದು ಪ್ರಭೇದದ ಇಲಿಗಳು ಸಂತಾನಾಭಿವೃದ್ಧಿಗೆ ಯೋಗ್ಯವಾದ ಕೂಡಲೇ ಸಂಗಾತಿಯೊಂದನ್ನು ಆರಿಸಿಕೊಂಡು ಜೀವಮಾನವೆಲ್ಲಾ ಅದರ ಜೊತೆ ಕಳೆಯುತ್ತವೆ. ಈ ಇಲಿಗಳಲ್ಲಿ ಮಿದುಳಿನ ರಾಸಾಯನಿಕ ವ್ಯಾಸೋಪ್ರೆಸಿನ್ ಅನ್ನು ಹಿಡಿತದಲ್ಲಿಡುವ ಒಂದು ಹೆಚ್ಚುವರಿ ಡಿಎನ್‌ಎ ಅಂಶವಿದೆಯೆಂದು ವಿಜ್ಞಾನಿಗಳು ಗಮನಿಸಿದರು. ಈ ಅಂಶವನ್ನು ತೆಗೆದು ಇತರ ಜಾತಿಯ ಇಲಿಗಳ ದೇಹಕ್ಕೆ ವರ್ಗಾಯಿಸಿದಾಗ ಅವುಗಳೂ ಕೂಡ ಏಕಸಂಗಾತಿ ವ್ರತಸ್ಥಗಳಾಗತೊಡಗಿದವು! ಇದೇ ಡಿಎನ್‌ಎ ಸಾಕಷ್ಟು ಮನುಷ್ಯರಲ್ಲಿಯೂ ಕಂಡುಬಂದಿದೆ. ಕೆಲವರಲ್ಲಿ ಇದು ಏಕೆ ಇರುವುದಿಲ್ಲ. ಇದರ ಪರಿಣಾಮಗಳೇನು ಎಂದು ಮುಂದೊಂದು ದಿನ ತಿಳಿಯಬಹುದು!

## ಪ್ರೀತಿಯಲ್ಲಿ ಏನೇನಾಗಬಹುದು?

ಪ್ರೀತಿಸುತ್ತಿರುವ ಜೋಡಿಗಳ ಮನಸ್ಸಿನಲ್ಲಿ ಭಾವನೆಗಳ ಮಹಾಪೂರವೇ ಹರಿಯುತ್ತಿರುತ್ತದೆ. ಅವುಗಳೆಲ್ಲವನ್ನೂ ಶಬ್ದಗಳಲ್ಲಿ ವಿವರಿಸುವುದು ಕಷ್ಟ. ಮಾತುಗಳ ಮಿತಿಗೆ ಸಿಗಬಹುದಾದ ಕೆಲವನ್ನು ಮಾತ್ರ ಹೇಳಬಹುದೇನೋ!

★ ಪ್ರೀತಿಸಿದ ವ್ಯಕ್ತಿ ಪ್ರಪಂಚದ ಅತ್ಯದ್ಭುತ ಸೃಷ್ಟಿ ಮತ್ತು ಸರ್ವಸ್ವವೂ ಆಗಿ ಪ್ರೇಮಿಗೆ ಕಾಣಿಸುತ್ತಾನೆ. ಪ್ರೇಮಿಯಲ್ಲಿ ದೋಷಗಳೇ ಕಾಣಿಸುವುದಿಲ್ಲ. ಸಾಮಾನ್ಯ ದೋಷಗಳೂ ಮೋಹಕವಾದ ಗುಣಗಳಾಗಿ ಕಾಣುತ್ತವೆ!

★ ಪ್ರೇಮಿಯ ಜೊತೆ ಕಳೆಯುವ ಪ್ರತಿ ಕ್ಷಣವೂ ಅತ್ಯದ್ಭುತ ಮತ್ತು ಸದಾ ನೆನಪಿನಲ್ಲಿ ಉಳಿವಂತಹದ್ದು. ಪ್ರೀತಿಗೆ ಸಂಬಂಧಿಸಿದ ಚಿಕ್ಕಚಿಕ್ಕ ವಿವರಗಳು, ಅವುಗಳ ನೆನಪು ರೋಮಾಂಚಕ.

★ ಪ್ರೀತಿಸುವವರು ತಮ್ಮ ಪ್ರಿಯಕರನ ಬಗೆಗೆ ವಿವೇಚನಾಶಕ್ತಿಯನ್ನು ಕಳೆದುಕೊಂಡಿರುತ್ತಾರೆ. ಪ್ರೇಮ ಕುರುಡು ಎಂದು ಇದೇ ಅರ್ಥದಲ್ಲಿ ಹೇಳಿರಬೇಕಲ್ಲವೇ?

★ ನಮ್ಮನ್ನು ಪ್ರೀತಿಸುವ ಜೀವವೊಂದಿದೆ ಎನ್ನುವ ಅನಿಸಿಕೆಯೇ ದೇಹ ಮನಸ್ಸುಗಳಿಗೆ ತಂಪೆರೆದು ಧನ್ಯತೆಯ ಸುಖ ನೀಡುತ್ತದೆ. ಪ್ರೇಮಿಯನ್ನು ಸೇರುವ ತವಕ ದೇಹ ಮನಸ್ಸುಗಳಿಗೆ ಪುಳಕ ಹುಟ್ಟಿಸಿ ಬಿಸಿಯೇರಿಸುತ್ತದೆ. ಪ್ರಣಯಿಯನ್ನು ಸದಾ ಆಕರ್ಷಿಸಲು ಹೊಸದೇನನ್ನಾದರೂ ಮಾಡುವ ಹುಡುಕಾಟದಲ್ಲಿ ಮನಸ್ಸು ನಿರತವಾಗಿರುತ್ತದೆ.

★ ಪ್ರಣಯವು ಹಸಿವು, ನಿದ್ದೆ, ನೀರಡಿಕೆಗಳನ್ನು ಮರೆಸಿಬಿಡುತ್ತದೆ. ಅಡಚಣೆಗಳು ಎದುರಾದಷ್ಟೂ ಪ್ರೀತಿಯ ತೀವ್ರತೆಯೂ ಹೆಚ್ಚಾಗುತ್ತದೆ!

★ ಪ್ರೀತಿಯ ಉತ್ತುಂಗದಲ್ಲಿದ್ದಾಗಲೂ ಅದನ್ನು ಕಳೆದುಕೊಳ್ಳುವ ಅಭದ್ರತೆ ಕಾಡುತ್ತಲೇ ಇರುತ್ತದೆ. ಹಾಗಾಗಿ ಯಾವಾಗಲೂ ತಮ್ಮ ಪ್ರೀತಿಯನ್ನು ಒಬ್ಬರಿಗೊಬ್ಬರು ಸಾಬೀತು ಮಾಡುತ್ತಲೇ ಇರಬೇಕಾಗುತ್ತದೆ!

★ ಪ್ರೀತಿ ಜಯಿಸಿಯೇ ತೀರುತ್ತದೆ ಎನ್ನುವ ಆಶಾಭಾವ ಹೋಗುವುದು ಕಷ್ಟಸಾಧ್ಯ. ಪ್ರೀತಿಯನ್ನು ಕಳೆದುಕೊಳ್ಳುವ ಭಯ ಮೂಡಿದಾಗಲೆಲ್ಲಾ ಪ್ರೇಮಿ ಹೊಸ ತಂತ್ರಗಳಿಂದ ಅದನ್ನು ಉಳಿಸಿಕೊಳ್ಳಲು ಪ್ರಯತ್ನಿಸುತ್ತಾನೆ.

★ ಪ್ರಣಯದ ಭಾವನೆಗಳು ನಶೆಯ ವಸ್ತುಗಳಂತೆಯೇ ಕೆಲಸಮಾಡುತ್ತದೆ. ದೈಹಿಕವಾಗಿಯೂ. ನಶೆಯ ವಸ್ತುಗಳನ್ನು ಸೇವಿಸಿದಾಗ ಉದ್ದೀಪನಗೊಳ್ಳುವ